

ನಾರುಬಟ್ಟೆಯ, ಚಿನ್ನದುಂಗುರದ ಪತಿರಾಯ ಕಂಪಿನ ಅಮಲಿನಲ್ಲಿ ಕರಗಿದ ಚಿತ್ರ ಮೂಡಿ ಎದ್ದು ಹಿಂಬಾಗಿಲಿಂದ ಹಿತ್ತಲಿಗೆ ನಡೆದು ಈಗಲೂ ಅಂದಿನಂತೆ ಅರಳಿ ನಿಂತ ಮಲ್ಲಿಗೆಯ ದಂಡೆ ಕಟ್ಟಿ ಮುಡಿದು ಗಂಡನ ಮುಖದ ಸಮೀಪ ಬಾಗಿದ್ದಳು. ಮಲ್ಲಿಗೆಯ ಪರಿಮಳದ ಉಸುರಿಗೆ ಪೂರ್ವಾಶ್ರಮದ ನೆನಪು ಕಲಕಿತೊ, ಗುರುತು ಹಿಡಿಯುವಂತೆ ಕಾಡುತ್ತಿದ್ದಾಳೆಂದು ಕಿರಿಕಿರಿ ಆಯಿತೊ ಅವನು ರೇಗಿದ್ದ.

'ಅಪ್ಪಯ್ಯ ಎಂಥ ಹೇಳ್ದ?' ಶ್ರೀಪತಿ ಅರೆಬರೆ ಕೇಳಿಸಿಕೊಂಡದ್ದನ್ನು ಪ್ರಮಾಣೀಕರಿಸಲು ಕೇಳಿದ.

'ನಾನು ಯಾರು ಹೇಳಿ ಅಂದ್ರು! ನನಗೆ ಹೆದ್ರಿಕೆ ಆಯ್ತು.'

'ಪರ್ವತೇಶ್ವರದ ವಿಶ್ವಾಮಿತ್ರ ಅವಧಾನಿಯವರ ಮಗ' ಎಂದು ಹೇಳಬೇಕಾಗಿತ್ತು.

ಮಲಗಿದ್ದ ಅವಧಾನಿ ಬಾಲ ಮೆಟ್ಟಿದ ಹಾವಿನಂತೆ ಎದ್ದು ಕುಳಿತು, 'ನಾನೇ ವಿಶ್ವಾಮಿತ್ರ ಅವಧಾನಿ' ಎಂದ.

'ಅಪ್ಪಾ, ವಿಶ್ವಾಮಿತ್ರ ನಿನ್ನ ತಂದೆ. ನೀನು ಜನಾರ್ದನ ಅವಧಾನಿ. ಹೋದ ವರ್ಷ ತೆರಿಗೆ ಇಲಾಖೆಯಿಂದ ನಿವೃತ್ತನಾದೆ. ನೆನಪ ಮಾಡ್ಕಾ.'

'ನನ್ನ ಮಗ ಗಜಾನನ. ಅವನಿಗೆ ಎಲ್ಲ ಗೊತ್ತುಂಟು ಕರಿ ಅವ್ನಾ' ಎಂದ.

ತಾನು ಮಗನಲ್ಲನೆಂದು ಗಜಾನನ ತಿಳಿಸಿ ಅಪ್ಪನ ನಂಬಿಗೆಯನ್ನು ಬದಲಾಯಿಸುವುದು ಹೇಗೆ, ತಾನೇ ವಿಶ್ವಾಮಿತ್ರನೆಂದು ತನ್ನ ತಂದೆಯ ಸ್ಥಾನದಲ್ಲಿ ನಿಂತ ಅವನ ಮನೋಶಾಸನದ ಗೊಂದಲವನ್ನು ತಿದ್ದುವುದು ಹೇಗೆ ಎಂದೆಲ್ಲ ಯೋಚಿಸುತ್ತ ಶ್ರೀಪತಿ ಚಿಂತಾಕ್ರಾಂತನಾದ. ಬೇರೆಯವರ ಗುರುತು ಪತ್ತೆ ಮಾಡುವುದಿರಲಿ, ತನ್ನ ಪರಿಚಯವೂ ಮನಸಿನಿಂದ ಅಳಿಸಿ ಹೋಗಿದೆ. ಗಜಾನನ ಹೊರಗೆಲ್ಲೊ ಹೋಗಿದ್ದಾನೆ. ಅವನಿದ್ದಿದ್ದರೆ ಈ ಹಾಸ್ಯಮಯ ಪ್ರಸಂಗಕ್ಕೆ ಎಷ್ಟು ನಗುತ್ತಿದ್ದನೊ ಎಂದು ಕಲ್ಪಿಸುತ್ತಾ ನಗತೊಡಗಿದ. ಯಮುನಕ್ಕ